



ಅಪ್ಲಿಕೇಶನ್ ತಂತ್ರಜ್ಞಾನ ಗೌಪ್ಯತೆಯನ್ನು ಕಾಪಾಡಲು ಅಷ್ಟು ಸಮರ್ಥವಾಗಿಲ್ಲ. ಬಳಕೆದಾರರ ವೈಯಕ್ತಿಕ ಮತ್ತು ಖಾಸಗಿ ಮಾಹಿತಿಯನ್ನು ಹ್ಯಾಕ್ ಮಾಡಬಹುದಾಗಿದ್ದು, ಅಪರಾಧಿಗಳು ವ್ಯಕ್ತಿಯ ಗುರುತನ್ನು ಯಾವ ರೀತಿಯಲ್ಲಾದರೂ ಬಳಸಬಹುದು. ಇದಕ್ಕೆ ಬಳಕೆದಾರರೇ ಹೊಣೆಗಾರರೇ ಹೊರತಾಗಿ ಸಾಮಾಜಿಕ ಜಾಲತಾಣಗಳಲ್ಲ.

ಸಾಮಾಜಿಕ ಜಾಲತಾಣಗಳು ತನ್ನ ಬಳಕೆದಾರರ ನಡುವೆ ಅನಾರೋಗ್ಯಕರ ಪೈಪೋಟಿಯನ್ನು ಉತ್ತೇಜಿಸಬಹುದು. ಸಾಮಾಜಿಕ ಜಾಲತಾಣದಲ್ಲಿ ಬಹುತೇಕ ಎಲ್ಲರೂ ತಮ್ಮ ಜೀವನದ ಅತ್ಯುತ್ತಮ ಕ್ಷಣಗಳ ಫೋಟೊಗಳನ್ನು, ರೋಮಾಂಚನಕಾರಿ ಘಟನೆಗಳನ್ನು ಪೋಸ್ಟ್ ಮೂಲಕ ಹಂಚಿಕೊಳ್ಳುತ್ತಾರೆ. ಚಂದದ ಪ್ರವಾಸಿ ತಾಣಗಳಿಗೆ ಭೇಟಿ ನೀಡಿದ್ದು, ದುಬಾರಿ ಹೋಟೆಲ್‌ಗಳಿಗೆ ಹೋಗಿದ್ದು, ತರಹೇವಾರಿ ತಿಂಡಿ ತಿನಿಸು ಸವಿದಿದ್ದು, ವಿದೇಶ, ದುಬಾರಿ ವಾಹನಗಳ ಜೊತೆ, ಹೀಗೆ. ಇಲ್ಲಿನ ಬಳಕೆದಾರರು ತಮ್ಮ ಜೀವನ ತುಂಬಾ ಶ್ರೀಮಂತಿಕೆಯಿಂದ ಆರಾಮದಾಯಕವಾಗಿದೆ ಎಂದು ತೋರಿಸಲು ಸ್ಪರ್ಧೆಗಿಳಿಯುವುದನ್ನು ಅಲ್ಲಗಳೆಯುವಂತಿಲ್ಲ. ಇತರ ಬಳಕೆದಾರರು ನಿರಂತರವಾಗಿ ಈ ತರಹದ ಪೋಸ್ಟ್‌ಗಳನ್ನು ನೋಡಿದಾಗ ತಮ್ಮ ಬದುಕಿನ ಕುರಿತಾಗಿ ಕೀಳರಿಮೆ ಅನುಭವಿಸುತ್ತಾರೆ. ಕೆಲ ಸಂದರ್ಭದಲ್ಲಿ ತಮ್ಮ ಜೀವನಶೈಲಿಯನ್ನು ನಕಲಿಯಾಗಿ ಬಿಂಬಿಸಿಕೊಳ್ಳತೊಡಗುತ್ತಾರೆ. ಸಾಲದ ಸುಳಿಗೆ ಸಿಲುಕುತ್ತಾರೆ. ಹಣಕ್ಕಾಗಿ ಬೇರೆ ಬೇರೆ ಮಾರ್ಗ ಹಿಡಿಯುತ್ತಾರೆ.

## ಹೋರಾಟದ ಹೊಸ ವೇದಿಕೆ

ಬದಲಾದ ಕಾಲಘಟ್ಟದಲ್ಲಿ ಹೋರಾಟದ ರೂಪಗಳು, ಮಾದರಿಗಳು ಕೂಡ ಬದಲಾಗಿವೆ. ಜನರ ಬದುಕಿನ ಶೈಲಿ ಬದಲಾಗಿದೆ. ಒತ್ತಡದ ಬದುಕು ಸಮಯವನ್ನು ಕಬಳಿಸುತ್ತಿರುವಾಗ ಹೋರಾಟಗಳು ನವ ತಂತ್ರಜ್ಞಾನ ಬಳಸಿಕೊಳ್ಳುತ್ತಿವೆ. ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಂಡು ಮಾಡುವ ಹೋರಾಟಗಳಿಗೆ 'ಸೋಷಿಯಲ್ ಮೀಡಿಯಾ ಆಕ್ಟಿವಿಸಂ' ಎನ್ನುತ್ತಾರೆ. ಯಾವುದೇ ವಿಷಯದ ಕುರಿತು ವಿಡಿಯೊ ಮಾಡುವುದು, ಬರಹಗಳನ್ನು ಹಾಕುವುದು, ಶೇರ್ ಮಾಡುವುದು, ಜನಜಾಗೃತಿ ಮೂಡಿಸುವುದು, ಹೆಚ್ಚುಹೆಚ್ಚು ಚರ್ಚೆ ಮಾಡುವ ಮೂಲಕ ಮುಖ್ಯವಾಹಿನಿ ಮಾಧ್ಯಮಗಳಿಗೆ ತಲುಪುವಂತೆ ಮಾಡುವುದು, ಈ ಮೂಲಕ ಅಧಿಕಾರಶಾಹಿಗಳಿಗೆ ಬಿಸಿ ಮುಟ್ಟಿಸುವುದು – ಇವೆಲ್ಲವೂ ಹೊಸ ಬಗೆಯ ಹೋರಾಟದ ದಾರಿಗಳೇ ಆಗಿವೆ.

ಹೋರಾಟದ ವಿಷಯಕ್ಕೆ ಸಂಬಂಧಿಸಿದ 'ಹ್ಯಾಶ್‌ಟ್ಯಾಗ್' ಬಳಸುವ ಮೂಲಕ ನಾವು ಅದರ ಪರವಾಗಿದ್ದೇವೆ ಅಥವಾ ವಿರೋಧಿಸುವವರ ಗುಂಪಿನಲ್ಲಿದ್ದೇವೆ ಎಂದು ರುಜು ಹಾಕಲಾಗುತ್ತದೆ. ಟ್ವಿಟರ್ ಅಭಿಯಾನಗಳು ಇದಕ್ಕೊಂದು ಉದಾಹರಣೆ. ಹೀಗೆ ಹ್ಯಾಶ್‌ಟ್ಯಾಗ್ ಬಳಕೆ ಮಾಡಿ ಮಾಡಲಾದ ಟ್ವೀಟ್‌ಗಳನ್ನು ಟ್ವಿಟರ್ ಲೆಕ್ಕ ಹಾಕುತ್ತದೆ. ನಿರ್ದಿಷ್ಟ ಸಮಯದಲ್ಲಿ ಟ್ವಿಟರ್ ಪೂರ್ವನಿಯೋಜಿಸಿದಂತೆ ಟ್ವೀಟ್‌ಗಳ ಸಂಖ್ಯೆ ಗುರಿ ತಲುಪಿದರೆ ಅದು ತನ್ನ ಪರದೆ ಮೇಲೆ ಇಣುಕುವ 'ಟ್ರೆಂಡಿಂಗ್'ನಲ್ಲಿ ಈ ಹ್ಯಾಶ್ ಟ್ಯಾಗನ್ನು ತೋರಿಸಲು ಆರಂಭಿಸುತ್ತದೆ. ಯಾವುದೇ ವಿಷಯದ ಪರ ವಿರೋಧವನ್ನು ಟ್ವೀಟ್‌ನ ಸಂಖ್ಯಾಬಲದ ಆಧಾರದಲ್ಲಿ ಎಣಿಸಲಾಗುತ್ತದೆ. ಪ್ರಜಾಪ್ರಭುತ್ವ ಮಾದರಿ ಸರ್ಕಾರಗಳು ಈ ಹೋರಾಟಗಳನ್ನು ಪರಿಗಣಿಸುತ್ತವೆ. ಸದನದಲ್ಲಿ ಸಾಮಾಜಿಕ ಜಾಲತಾಣ ಹೋರಾಟಗಳನ್ನು ಉಲ್ಲೇಖಿಸಿದ ಸಾಕಷ್ಟು ಉದಾಹರಣೆಗಳು ಇವೆ. ಭಾಷೆ, ಪರಿಸರ, ಯುದ್ಧ,

### 'ನೀಲಿ ಗೆರೆ'ಗಳ ಛಾಪು

ಯಾವುದೇ ಸೋಷಿಯಲ್ ಮೀಡಿಯಾ ಖಾತೆಗಳ ಮುಂದೆ ನೀಲಿ ಬಣ್ಣದ ಚಿಕ್ಕ ವೃತ್ತವಿದ್ದು, ಅದರೊಳಗೆ ಸರಿ ಚಿಹ್ನೆ ಇದ್ದರೆ ಆ ಖಾತೆ 'ವೆರಿಫೈಡ್' ಅಂದರೆ ಮಾನ್ಯಗೊಂಡಿದೆ ಎಂದರ್ಥ. ರಾಜಕೀಯ ನಾಯಕರು, ಸೆಲೆಬ್ರಿಟಿಗಳು, ಉದ್ಯಮಿಗಳು, ಮಾಧ್ಯಮಗಳು ತಮ್ಮ ಹೆಸರಿನಲ್ಲಿ ಯಾರೂ ನಕಲಿ ಖಾತೆಗಳನ್ನು ತೆರೆಯಬಾರದು, ತೆರೆದರೂ ಅದು ನಕಲಿ ಎಂದು ಜನರಿಗೆ ಗೊತ್ತಾಗಬೇಕು ಎಂಬ ಕಾರಣಕ್ಕೆ ತಮ್ಮ ಪೇಜ್‌ಗಳಿಗೆ, ಖಾತೆಗಳಿಗೆ ಮಾನ್ಯತೆ ಪಡೆಯುತ್ತಾರೆ. ಸಂಬಂಧಿತ ಸಾಮಾಜಿಕ ಜಾಲತಾಣ ಕಂಪನಿ ಈ ಮಾನ್ಯತೆ ನೀಡುತ್ತದೆ. ಈ ರೀತಿ ನೋಂದಾಯಿತ ಖಾತೆಗಳು ನೀಲಿ ಗೆರೆಯನ್ನು ಹೊಂದಿರುತ್ತವೆ. ಇದಕ್ಕೆ ಹಣ ಖರ್ಚಾಗುವುದರಿಂದ ಸಾಮಾನ್ಯ ಬಳಕೆದಾರರು ಮಾಡಿಸುವುದಿಲ್ಲ. ವೆರಿಫೈ ಮಾಡುವ ವಿಧಾನಗಳು ಕೂಡ ಅಷ್ಟು ಸುಲಭವಲ್ಲ.